ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ನಾವು ಲಾಸ್ಟ್‌ನಲ್ಲಿ ಮಾತನಾಡಿದ್ದೇವೆ. ಎಲ್ಲಾ ಮರೆತಿರಿ. ಅದು ಎಲ್ಲೂ ರೆಫರ್ ಆಗಲೆ ಇಲ್ಲ.

ಗೊಂದಲ

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸುಬ್ಬಾರೆಡ್ಡಿಯವರು ಮಾಡಿರತಕ್ಕಂಥ ಹಲವಾರು ಸಲಹೆಗಳು ಏನಿವೆ, ಆ ಸಲಹೆಗಳನ್ನೆಲ್ಲಾ ಸ್ವಾಗತಿಸಿ, ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಬೆಳೆ ವಿಮೆ ಅವಧಿ ವಿಸ್ತರಣೆ ಬಗ್ಗೆ ಏನೂ ಸ್ಪಷ್ಟೀಕರಣ ಬರಲಿಲ್ಲ.

ಶ್ರೀ ವಿ.ಎಸ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಮೊದಲನೆ ದಿವಸ ತಾವು ಇಲ್ಲಿ ಇವಲಿಲ್ಲ. ಮಾನ್ಯ ಅಜಿತ್ ಸಿಂಗ್ ಅವರು ಮೀಟಿಂಗ್ ಕರೆದಾಗ ನಾನು ಹೋಗಿದ್ದೆ. ಇದನ್ನೇ ಅವರಿಗೆ ರಿಕ್ವೆಸ್ಟ್ ಮಾಡಿಬಿಟ್ಟು ಒಂದು ತಿಂಗಳು ಹೆಚ್ಚಿಗೆ ಕೊಡಿ, ಆಗಸ್ಟ್ 31ರವರೆಗೆ ಎಂದು ಹೇಳಿದಾಗ ಅದಕ್ಕೆ ಅವರು ನಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ಇನ್ನುವರೆಗೆ ನಮಗೆ ಅವರಿಂದ ಏನೂ ಕಮ್ಯೂನಿಕೇಷನ್ ಬಂದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾವು ಹೇಳುತ್ತಲೇ ಇದ್ದೇವೆ, ಅದಕ್ಕೆ ಸರ್ಕಾರ ಸ್ಪಂದನ ಕೊಟ್ಟಿಲ್ಲ. ವಿದ್ಯುತ್ ಏರಿಕೆ ಬಗ್ಗೆ ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೇಳಿದರು. ಮತ್ತೆ 12.5 ಪರ್ಸೆಂಟ್‌ನವರೆಗೂ ಇನ್‌ಕ್ರೀಸ್ ಮಾಡಬೇಕೆಂದು ಸರ್ಕಾರದ ಪ್ರಪೋಸಲ್ ಕೊಟ್ಟಿದೆ. ಹೀಗಾಗಿ ಇವತ್ತು ವಿದ್ಯುತ್ ದರ ಏರಿಕೆ ಬಗ್ಗೆ, ಬರಗಾಲ ಚಿಂತನೆ ಬಗ್ಗೆ ಸರ್ಕಾರದ ಸ್ಪಷ್ಟೀಕರಣ ಬರಲಿಲ್ಲ. ಮತ್ತು ರಾಜಕೀಯ ವ್ಯಕ್ತಿಗಳ ಮೇಲೆ ದೌರ್ಜನ್ಯ ನಡೆಯುವಂತದ್ದರ ಬಗ್ಗೆ ಸರ್ಕಾರದ ಕಡೆಯಿಂದ ಸ್ಪಷ್ಟನೆ ಬರಲಿಲ್ಲ. ರೈತ ವಿರೋಧಿ ಧೋರಣೆಯನ್ನು ಸರ್ಕಾರ ಅನುಕರಣೆ ಮಾಡುತ್ತಿದೆ. ಬರಗಾಲ ಪರಿಸ್ಥಿತಿ ಬಗ್ಗೆ ಮಾತನಾಡುವುದಕ್ಕೆ ಸಿದ್ಧವಿಲ್ಲ. ವಿದ್ಯುತ್ ದರ ಏರಿಕೆ ಮಾಡುತ್ತಿದ್ದಾರೆ. ರಾಜಕೀಯ ಕಾರ್ಯಕರ್ತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಹೀಗಾಗಿ ಇದನ್ನು ನಾವು ಪ್ರತಿಭಟನೆ ಮಾಡುತ್ತಾ, ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಾರ್ಟಿ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಮಗೆ ಸಭಾತ್ಯಾಗ ಮಾಡಬೇಕು ಎನ್ನುವ ಉದ್ದೇಶ ಇಲ್ಲ. ಆದರೆ ಪ್ರತಿಭಟನೆ ಮಾಡಬೇಕೆಂದು ಇದ್ದೇವೆ. ಏಕೆಂದರೆ ಆಂಧ್ರ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹೋಗಿದ್ದರು. ಅವರು ಹೋದಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಾರ್ಟಿ ಹಣದಿಂದ ಅಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವಂತಹ ರೈತರಿಗೆ ದುಡ್ಡು ಕೊಟ್ಟಿದ್ದೀರಿ. ಇಲ್ಲಿ ನಾವು ರಾಜ್ಯ ಸರ್ಕಾರದ ಬೊಕ್ಕಸದ ಜವಾಬ್ದಾರಿಯನ್ನು ತೆಗೆದುಕೊಂಡ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿ ಕೊಡುತ್ತಿದ್ದೆವು. ನಾವು ಎರಡೂವರೆ ವರ್ಷದಿಂದ ಹೇಳುತ್ತಿದ್ದೇವೆ, ವೀರೇಶ್ ವರದಿ ಆಯಿತು. ಆ ವರದಿ ಬಂದು ಆರು ತಿಂಗಳಾಯಿತು. ನಿಮ್ಮ ಸಚಿವ ಸಂಪುಟದ ಮುಂದೆ ಇದನ್ನು ಇನ್ನು ಪರಿಶೀಲನೆ ಮಾಡುತ್ತಿದ್ದೀರಿ. ಇದು ಒಂದು ವಿಚಾರವಾಯಿತು. ಎಐಸಿಸಿಯಿಂದ ಆಂಧ್ರಪ್ರದೇಶದ ಕಾಂಗ್ರೆಸ್ ಪಾರ್ಟಿ ಅಧ್ಯಕ್ಷರು ರೈತರಿಗೆ ನಾವು ಪುಕ್ಕಟೆಯಾಗಿ ಕರೆಂಟ್ ಕೊಡುತ್ತೇವೆ ಎಂದರೆ ಅದಕ್ಕೆ ಒಪ್ಪಿಗೆ ಎಂದು ಹೇಳುತ್ತೀರಿ. ಇಲ್ಲಿ ಹದಿಮೂರುವರೆ ಪರ್ಸೆಂಟ್ ಹೆಚ್ಚಿಗೆ ಮಾಡಿದ್ದೀರಿ. ಇದು ಯಾವ ನ್ಯಾಯ? ಮತ್ತೆ ಬರಗಾಲದ ವಿಚಾರದಲ್ಲಿ ತಾವು ಮಾನ್ಯ ಎರ್ಗೆಯವರ ಅಧ್ಯಕ್ಷತೆಯಲ್ಲಿ ಕ್ಯಾಬಿನೇಟ್ ಸಬ್ ಕಮಿಟಿ ಮಾಡಿದ್ದೀರಿ.